**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**
**ಹಾಗೂ ಎಫ್.ಟಿ.ಎಸ್.ಸಿ-1, ಹಾವೇರಿ**
**ಎಸ್.ಸಿ.18/2020**

PW- 02

CW-01

ಸಾಕ್ಷಿದಾರರ ಹೆಸರುಃ ರಾಮನಾಥ ಚೌದರಿ

ತಂದೆ ಹೆಸರುಃ ವಿಟ್ಟಪ್ಪ

ವಯಸ್ಸುಃ 67 ವರ್ಷ

ಉದ್ಯೋಗಃ ವ್ಯವಸಾಯ

ಹಾಲಿ ವಾಸ ಸ್ಥಳಃ ಬನವಾಸಿ ತಾಃ ಶಿರಸಿ

**ದಿನಾಂಕ: 20.04.2024 ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ಶಾಂತಾಬಾಯಿ ನನ್ನ ಅಕ್ಕ. ನನ್ನ ಅಕ್ಕಳಿಗೆ ಚಾಸಾ-8 ರಿಂದ 12 ಒಟ್ಟು 5 ಜನ ಮಕ್ಕಳು. ಮೃತ ಶಾಂತಾಬಾಯಿ ಶಿಗ್ಗಾಂವ ಪಟ್ಟಣದ ಹಳೆಪೇಟೆ ತಮ್ಮ ಸ್ವಂತ ಮನೆಯಲ್ಲಿ ಒಬ್ಬಳೇ ವಾಸಿಸುತ್ತಿದ್ದಳು. ಮೃತ ನನ್ನ ಅಕ್ಕನ ಗಂಡ 2012 ರಲ್ಲಿ ತೀರಿಕೊಂಡಿರುತ್ತಾಳೆ. ಮೃತ ನನ್ನ ಅಕ್ಕನ 5 ಮಕ್ಕಳ ಪೈಕಿ 4 ಜನ ಗಂಡು ಮಕ್ಕಳಿಗೆ ಮದುವೆಯಾಗಿದ್ದು ಪ್ರತ್ಯೇಕವಾಗಿ ವಾಸವಾಗಿದ್ದಳು. ನನ್ನ ಅಕ್ಕನ ಒಬ್ಬಳೇ ಮಗಳನ್ನು ಚಾಸಾ-12 ಇವಳು ಶಿಕಾರಿಪುರಕ್ಕೆ ಮದುವೆಯನ್ನು ಮಾಡಿಕೊಟ್ಟಿದ್ದು ಅವಳು ಗಂಡನ ಮನೆಯಲ್ಲಿ ವಾಸವಾಗಿದ್ದಳು. ನಾನು ಮತ್ತು ಚಾಸಾ-8 ರಿಂದ 12 ರವರು ನನ್ನ ಅಕ್ಕನ ಮನೆಗೆ ಆಗಾಗ ಹೋಗಿ ಬಂದು ಮಾಡುತಿದ್ದೆವು.

ತಾಃ 15.08.2019 ರಂದು ರಾಖಿ ಹಬ್ಬದ ನಿಮಿತ್ತ ನನಗೆ ಕರೆ ಮಾಡಿ ಶುಭಾಷಯ ತಿಳಿಸಿ ಕೊನೆಯ ಬಾರಿ ಮಾತನಾಡಿದ್ದಳು. ತಾಃ 17.08.2019 ರಂದು ಬೆಳಿಗ್ಗೆ ಸುಮಾರು 8.30 ಕ್ಕೆ ಮೃತ ನನ್ನ ಅಕ್ಕನ ಮಗ ಚಾಸಾ-8 ನನಗೆ ಕರೆ ಮಾಡಿ ನನ್ನ ಅಕ್ಕನಿಗೆ ಹೃದಯಾಘಾತವಾಗಿ ತೀರಿಕೊಂಡಿರುತ್ತಾಳೆಂದು ಹೇಳಿದರು. ನಾನು ವಿಷಯ ಗೊತ್ತಾಗಿ ನಾನು ಮತ್ತು ನನ್ನ ಇನ್ನೊರ್ವ ಸಹೋದರ ಮತ್ತು ಕುಟುಂಬ ಸಮೇತ ಶಿಗ್ಗಾಂವ ಹಳೇಪೇಟೆಯ ನನ್ನ ಮೃತ ಅಕ್ಕನ ಮನೆಗೆ ಹೋದೆವು. ನನ್ನ ಅಕ್ಕನ ಮನೆಯ ಮುಂದೆ ಮತ್ತು ಒಳಗಡೆ ಸಾಕಷ್ಟು ಜನ ಸೇರಿದ್ದರು. ನಾನು ಮನೆಯ ಒಳಗಡೆ ಹೋಗಿ ನೋಡಲಾಗಿ ನನ್ನ ಮೃತ ಅಕ್ಕನ ಶವ ಮಂಚದ ಮೇಲೆ ಇದ್ದು ಅವಳ ಕೈಗಳನ್ನು ಸೀರೆಯಿಂದ ಹಿಂದೆಯಿಂದ ಕಟ್ಟಿದ್ದು, ನನ್ನ ಅಕ್ಕಳ ಬಟ್ಟೆ ಅಸ್ತವ್ಯಸ್ತವಾಗಿದ್ದು, ಅವಳ ಕಣ್ಣುಗಳಿಗೆ ಮತ್ತು ಕುತ್ತಿಗೆಗೆ ಸೀರೆಯಿಂದ ಬಿಗಿಯಲಾಗಿದ್ದು, ಎರಡು ತಲೆದಿಂಬುಗಳು ಶವದ ಅಕ್ಕಪಕ್ಕ ಬಿದ್ದಿದ್ದವು. ಸದರಿ ತಲೆ ದಿಂಬುಗಳ ಮೇಲೆ ರಕ್ತದ ಕಲೆಗಳಾಗಿದ್ದವು. ನನ್ನ ಅಕ್ಕಳ ಎರಡು ಗಲ್ಲಗಳ ಬೆರಳುಗಳು ಒತ್ತಿದ ಗುರುತುಗಳು ಇದ್ದವು. ನನ್ನ ಅಕ್ಕನ ಬಾಯಿಂದ ರಕ್ತ ಸೂಸಿತ್ತು. ನನ್ನ ಅಕ್ಕಳ ಶವವನ್ನು ನೋಡಿದಾಗ ಉಸಿರುಗಟ್ಟಿಸಿ ಅವಳನ್ನು ಕೊಲೆ ಮಾಡಿದ ಬಗ್ಗೆ ಕಂಡು ಬಂದಿತು. ನನ್ನ ಅಕ್ಕ ಸ್ವೇಟರ್ ಧರಿಸುತ್ತಿದ್ದಳು. ಮೃತ ನನ್ನ ಅಕ್ಕನ ಮೈ ಮೇಲೆ ಬಂಗಾರದ ಆಭರಣಗಳನ್ನು ಧರಿಸುತ್ತಿದ್ದಳು. ( ಈ ಹಂತದಲ್ಲಿ ಸಾಕ್ಷಿಯು ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯ್ತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.

ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.

PW- 01

CW-01

**ದಿನಾಂಕ:22.02.2024 ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿದ್ದು, ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.